**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರು.**

ಸಿಸಿ ಸಂಖ್ಯೆಃ 519/2023

ಪಿಡಬ್ಲ್ಯೂಃ 03 ಸಿಡಬ್ಲ್ಯೂ : 01
ದಿನಾಂಕಃ 05.08.2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ಮಹೇಶಗೌಡ ಪಾಟೀಲ |
| ತಂದೆ/ಗಂಡನ ಹೆಸರು | - ನಾಗನಗೌಡ ಪಾಟೀಲ |
| ವಯಸ್ಸು | - 41 ವರ್ಷಗಳು |
| ಉದ್ಯೋಗ | - ಅಬಕಾರಿ ನೀರಿಕ್ಷಕರ ಹಾನಗಲ್ ಅಬಕಾರಿ ಇಲಾಖೆ |
| ವಾಸ ಸ್ಥಳ | - ಹಾನಗಲ್ |

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದ.**

ನಾನು ನವೆಂಬರ್ 2020 ರಿಂದ ಡಿಸೆಂಬರ್ 2024 ರ ವರೆಗೆ ಅಬಕಾರಿ ನೀರಿಕ್ಷಕನಾಗಿ ಸವಣೂರಿನಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ನದಿಃ 31-03-2023 ರಂದು ಮುಂಜಾನೆ 7.30 ಗಂಟೆ ಸುಮಾರಿಗೆ ನನಗೆ ಬಂದ ಬಾತ್ಮಿ ಏನೆಂದರೆ ಸವಣೂರ ತಾಲೂಕಿನ ಹೂವಿನಶಿಗ್ಲಿ ಗ್ರಾಮದ ರಾಮಪ್ಪ ಯಲ್ಲಪ್ಪ ಬಂಡಿ ರವರು ತಮ್ಮ ಕಿರಾಣಿ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡಲು ಸಂಗ್ರಹ ಮಾಡಿದ್ದಾರೆ ಎಂದು ತಿಳಿದು ಬಂದಿರುತ್ತದೆ. ಆ ಬಾತ್ಮಿ ಮುಖಾಂತರ ಸವಣೂರ ಬಸ್ಸ ನಿಲ್ದಾಣದಲ್ಲಿ ಇಬ್ಬರು ಪಂಚರನ್ನು ಕರೆದುಕೊಂಡು, ನಮ್ಮ ಸರ್ಕಾರಿ ವಾಹನದಲ್ಲಿ ಅಲ್ಲಿಪೂರ ಮತ್ತು ಪರಮವಾಡಿ ಗ್ರಾಮದ ಮುಖಾಂತರ ಹೂವಿನಶಿಗ್ಲಿ ಗ್ರಾಮವನ್ನು ತಲುಪಿದೆವು. ನನ್ನ ಜೊತೆ ಚಾಸಾ- 4 ರಿಂದ 6 ರವರು ಮತ್ತು ಪಂಚರು ಇದ್ದರು. ನಾವು ತಲುಪಿದಾಗ ಮುಂಜಾನೆ 7.50 ಆಗಿತ್ತು. ಆಗ ಸ್ಥಳಿಕರ ನೆರವಿನಿಂದ ಆರೋಪಿಯ ಕಿರಾಣಿ ಅಂಗಡಿಯನ್ನು ಪತ್ತೆ ಹಚ್ಚಿದೆವು. ಕಿರಾಣಿ ಅಂಗಡಿಯ ಬಳಿ ಹೋಗಿ ನೋಡಲಾಗಿ ಬಾಗಿಲು ತೆರೆದಿತ್ತು, ಆಗ ಒಬ್ಬ ವ್ಯಕ್ತಿಯು ನಮ್ಮನ್ನು ತಡಬಡಾಯಿಸದನು. ಆಗ ನಮ್ಮ ಸಿಬ್ಬಂದಿಗಳು ಅವನಲ್ಲಿ ಹೋಗಿ ಬಾತ್ಮಿ ಬಂದ ವಿಷಯವನ್ನು ತಿಳಿಸಿದಾಗ ನಾನು ಯಾವುದೇ ಮದ್ಯವನ್ನು ಸಂಗ್ರಹ ಮಾಡಿಲ್ಲ ಎಂದು ತೊದಲುತ್ತ ನುಡಿದನು. ಆಗ ಅವನನ್ನು ವಿಚಾರಿಸಿದಾಗ ಅವನ ಹೆಸರು ರಾಮಣ್ಣ ಯಲ್ಲಪ್ಪ ಬಂಡಿ ಎಂದು ಹೇಳಿದನು.

ಆಗ ಸದರಿ ಕಿರಾಣಿ ಅಂಗಡಿಯನ್ನು ಶೋಧನೆ ಮಾಡಲು ಸಮಯವಕಾಶ ಇಲ್ಲದೆ ಇದ್ದ ಕಾರಣ ಸ್ಥಳದಲ್ಲಿಯೇ ಶೋಧನಾ ಸಮುಚ್ಚಿತ ವರದಿಯನ್ನು ತಯಾರಿಸಿ ಕಿರಾಣಿ ಅಂಗಡಿಯನ್ನು

ಪ್ರವೇಶಿಸಿದೆವು. ಅಂಗಡಿಯನ್ನು ಪ್ರವೇಶಿಸಲಾಗಿ ಅಂಗಡಿಯ ಕೌಂಟರ ಕೆಳಗಡೆ ಎರಡು ರಟ್ಟಿನ ಪೆಟ್ಟಿಗೆಗಳು  ಕಂಡು ಬಂದವು. ಅದನ್ನು ತೆರೆದು ನೋಡಲಾಗಿ ಅದರಲ್ಲಿ ಮದ್ಯದ ಟೆಟ್ರಾ ಪ್ಯಾಕಗಳು ಕಂಡ ಬಂದವು. ಅದನ್ನು ಪರಿಶೀಲಿಸಲಾಗಿ ಅದರಲ್ಲಿ

1. 32 X  180 ಎಮ್ ಎಲ್ ನ ಓಲ್ಡ ಟೆವರಿಂಗ ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕಗಳು ಮತ್ತು,

2. 135 X  90 ಎಮ್ ಎಲ್ ನ ಓರಿಜನಲ್ ಚಾಯ್ಸ  ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕಗಳು ಕಂಡು ಬಂದವು.

ನಂತರ ಈ ಮದ್ಯವನ್ನು ಸಂಗ್ರಹ ಮಾಡಲು ನಿನ್ನ ಬಳಿ ಯಾವುದಾದರೂ ಪಾಸ್ ವ ಪರಮಿಟ್ ಇದೆಯಾ ಎಂದು ಕೇಳಿದಾಗ ಅವನು ಇಲ್ಲ ಎಂದು ಹೇಳಿದನು. ನಂತರ ಈ ಮದ್ಯದ ಟೆಟ್ರಾ ಪ್ಯಾಕಗಳನ್ನು ಎಲ್ಲಿಂದ ತಂದ್ದಿದೀಯಾ ಎಂದು ಕೇಳಲಾಗಿ ಅವನು ಸರಿಯಾದ ಉತ್ತರ ನೀಡಿರುವುದಿಲ್ಲ. ನಂತರ ಸದರಿ ಟೆಟ್ರಾ ಪ್ಯಾಕಳನ್ನು ಸೂಕ್ಷವಾಗಿ ಪರಿಶೀಲಿಸಿದಾಗ ಅವುಗಳ ಮೇಲಿ ಭದ್ರತಾ ಚೀಟಿಗಳನ್ನು ಕಿತ್ತು ಹಾಕಿರುವುದವು ಕಂಡು ಬಂದಿರುತ್ತದೆ.  ಕಿತ್ತು ಹಾಕಿರುವ ವಿಷಯವನ್ನು ಪಂಚರಿಗೆ ತಿಳಿಸಲಾಯಿತು.

ನಂತರ ಕಿರಾಣಿ ಅಂಗಡಿಯ ಇತರೆ ಭಾಗವನ್ನು ಪರಿಶೀಲಿಸಲಾಗಿ ಮದ್ಯವನ್ನು ಅಳತೆ ಮಾಡುವ ಮಾಪನ ದೊರಕಿರುತ್ತದೆ. ನಂತರ ಪಂಚರಿಗೆ ಈ ಅಕ್ರಮವಾಗಿ ಮದ್ಯವನ್ನು ಸಂಗ್ರಹಮಾಡಿ ಮಾರಾಟ ಮಾಡುವುದು ಅಪರಾಧ ಎಂದು ತಿಳಿಸಿ ಮುದ್ದೆಮಾಲಗಳನ್ನು ಮತ್ತು ಆರೋಪಿಯನ್ನು ವಶಪಡಿಸಿಕೊಂಡು, ಕಲಂ 41(ಎ)(1) (2) ರಡಿಯಲ್ಲಿ ನೋಟಿಸನ್ನು ನೀಡಿ ದಿಃ 06-04-2023 ರಂದು ಠಾಣೆಗೆ ಹಾಜರಾಗಲು ಸೂಚಿಸಿದೆವು.

ನಂತರ ದೊರೆತ ಮುದ್ದೆಮಾಲಿನ ಪೈಕಿ 13 X  180 ಎಮ್ ಎಲ್ ನ ಓಲ್ಡ ಟೆವರಿಂಗ ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕಗಳನ್ನು  ಮತ್ತು,  26 X  90 ಎಮ್ ಎಲ್ ನ ಓರಿಜನಲ್ ಚಾಯ್ಸ  ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕಗಳನ್ನು ರಾಸಾಯನಿಕ ಪರೀಕ್ಷಗೆ ಮಾದರಿ ತೆಗೆದು ಒಂದು ರಟ್ಟಿನ ಪೆಟ್ಟಿಗೆಯಲ್ಲಿ ಬಿಳಿ ಬಟ್ಟೆಯಿಂದ ಸುತ್ತಿ ಪಂಚರು ಮತ್ತು ನಾವು ಮಾಡಿದ ಚೀಟಿಯನ್ನು ಅಂಟಿಸಿ ಸೀಲ್ ಮಾಡಲಾಯಿತು. ಸ್ಥಳದಲ್ಲಿಯೇ  ಮಾದರಿ ಶೀಲನ ನಕಲನ್ನು ತಯಾರು ಮಾಡಲಾಯಿತು. ಸದರಿ ಪಂಚನಾಮೆಯನ್ನು ಆರೋಪಿಯ ಕಿರಾಣಿ ಅಂಗಡಿಯಲ್ಲಿ ಮುಂಜಾನೆ 8.00 ರಿಂದ 9.00 ಗಂಟೆಯವರಗೆ ಪಂಚರ ಸಮಕ್ಷಮ ಜರುಗಿಸಲಾಯಿತು. ನಂತರ ಮುದ್ದೆಮಾಲಿನೊಂದಿಗೆ ಕಚೇರಿಗೆ ಬಂದು ಸರ್ಕಾರಿ ತರ್ಪಿಯನ್ನು ನೀಡಿ ನಡೆದ ಘಟನಾವಳಿಬಗ್ಗೆ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ  ಮಾನ್ಯ ನ್ಯಾಯಾಲಯಕ್ಕೆ ಸದರಿ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುತ್ತೇನೆ.

ನಂತರ ವಶಪಡಿಸಿಕೊಂಡ ಮುದ್ದೆಮಾಲುಗಳನ್ನು ಇಲಾಖಾ ವಶದಲ್ಲಿ ಇಟ್ಟು ಕೊಳ್ಳಲು

ಪ್ರಾಧಿಕ್ರತ ಅಧಿಕಾರಿಗಳಿಂದ ಅನುಮತಿ ಪಡೆದುಕೊಳ್ಳಲಾಯಿತು. ನಂತರ ಸದರಿ ಪ್ರಕರಣದ ಮುಂದಿನ ತನಿಖೆಗಾಗಿ ದಿಃ 21-04-2023 ರಂದು ಚಾಸಾ- 11 ರವರಿಗೆ ಕಡತಗಳನ್ನು ಹಸ್ತಾಂತರಿಸಲಾಯಿತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದು ಶೋಧನಾ ಸಮುಚ್ಚಿತ ವರದಿಯಾಗಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು 4(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ- 1 ತೋರಿಸಿದ್ದು ಅದು ಸ್ಥಳ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ- 1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು 1(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ- 2 ತೋರಿಸಿದ್ದು ಅದು ಮಾದರಿ ಸೀಲನ ನಕಲಾಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು 2(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ- 3 ತೋರಿಸಿದ್ದು ಅದು ಮಾದರಿ ಚೀಟಿಯ ನಕಲಾಗಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು 3(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದು ತಾನು ನೀಡಿದ ಪಿರ್ಯಾಧಿಯನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು 5(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು ಅದು ತಾನು ದಾಖಲಿಸಿಕೊಂಡ ಪ್ರಥಮ ವರ್ತಮಾನ ವರದಿಯಾಗಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು 6(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು ಅದು ಪ್ರಾದಿಕೃತ ಅಧಿಕಾರಿಗಳಿಗೆ ಕಳುಹಿಸಿಲಾಗಿರುವ ವಶಪಡಿಸಿಕೊಂಡಿರುವ ವಸ್ತುಗಳ ಪಟ್ಟಿಯನ್ನು ನಮ್ಮ ತಮ್ಮ ಬಳಿ ಇಟ್ಟುಕೊಳ್ಳಲು ಬರೆದ ಪತ್ರದ ನಕಲನ್ನು ಹಾಜರುಪಡಿಸಿದ್ದು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು ಸಾಕ್ಷಿಯ ಸಹಿಯನ್ನು 7(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು ಅದು ತಾನು ವಶಪಡಿಸಿಕೊಂಡ ಮದ್ಯಗಳ ಪಟ್ಟಿಯಾಗಿದ್ದು ಅದನ್ನು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು ಸಾಕ್ಷಿಯ ಸಹಿಯನ್ನು 8(ಎ) ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲುಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು 13 X 180 ಎಮ್ ಎಲ್ ನ ಓಲ್ಡ ಟೆವರಿಂಗ ವಿಸ್ಕಿಯ ಟೆಟ್ರಾ ಪ್ಯಾಕಗಳನ್ನು ಒಟ್ಟಾರೆಯಾಗಿ

ಮುಮಾ- 1 ಎಂದು, 26 X 90 ಎಮ್ ಎಲ್ ನ ಓರಿಜನಲ್ ಚಾಯ್ಸ ವಿಸ್ಕಿಯ ಟೆಟ್ರಾ ಪ್ಯಾಕಗಳನ್ನು ಒಟ್ಟಾರೆಯಾಗಿ ಮುಮಾ- 2 ಎಂದು ಮತ್ತು ಒಂದು ಅಳತೆಯ ಮಾಪನವನ್ನು ಮುಮಾ- 3 ಎಂದು ಗುರುತಿಸಲಾಗಿದೆ.

ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

<u>**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಮ್ ಎಸ್ ಎಮ್ ಎಚ್ ವಕೀಲರಿಂದ**</u>

ನೀವು ಸವಣೂರನ್ನು ಬಿಟ್ಟಾಗ ಸಮಯ ಎಷ್ಟಾಗಿತ್ತು ಎಂದರೆ ಮುಂಜಾನೆ 7.30 ಆಗಿತ್ತು. ಆ ವೇಳೆಯಲ್ಲಿ ಸಾರ್ವತ್ರಿಕ ವಿಧಾನ ಸಭಾ ಚುನಾವಣೆ ಇತ್ತು ಎಂದರೆ ಸರಿ. ನಿಮ್ಮ ಫಿರ್ಯಾಧಿಯಲ್ಲಿ ದಿಃ 31-03-2023 ರಂದು ಮುಂಜಾನೆ 8.00 ರ ಸುಮಾರಿಗೆ ನಮೂದು ಮಾಡಿದ್ದೀರಿ ಎಂದರೆ ಘಟನೆ ನಡೆದ ಸ್ಥಳದ ಸಮಯನ್ನು ನಮೂದಿಸಿರುತ್ತೇನೆ. ನಿಮ್ಮ ಫಿರ್ಯಾಧಿಯಲ್ಲಿ ಮುಂಜಾನೆ 8.00 ಗಂಟೆಗೆ ನಿಮ್ಮ ಅಧಿಕಾರಿಗಳ ಆದೇಶದ ಮೇರೆಗೆ ಗಸ್ತು ಕಾರ್ಯ ಮಾಡುತ್ತಿದ್ದೀರಿ ಎಂದು ನಮೂದಿಸಿದ್ದೀರಿ ಎಂದರೆ ಸರಿ. ನೀವು 8.00 ಗಂಟೆಗೆ ನಿಮ್ಮ ಮೇಲಾಧಿಕಾರಿಗಳು ಆದೇಶ ನೀಡಿದ್ದರು ನೀವು ಅದಕ್ಕಿಂತ ಮುಂಚೆಯೇ ಅಂದರೆ 7.30 ಗೆ ಬಾತ್ಮಿ ಬಂದಿದೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಬಾತ್ಮಿ ಬಂದ ವಿಷಯವನ್ನು ನಾನು ಫಿರ್ಯಾಧಿಯಲ್ಲಿ ನಮೂದು ಮಾಡಿಲ್ಲ ಆದರೆ ಪಂಚನಾಮೆಯಲ್ಲಿ ಮಾಡಿದ್ದೇನೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ನಿಮಗೆ ಬಾತ್ಮಿ ಬಂದಿದ್ದು ಮುಂಜಾನೆ 7.30 ಎಂದು ಹೇಳಿದ್ದೀರಿ ಎಂದರೆ ಸರಿ.

ಚಾಸಾ- 2 ಮತ್ತು 3/ಪಂಚರು ಸವಣೂರಿನವರು ಅಲ್ಲ ಎಂದರೆ ಸರಿ. ಸುಮಾರು ಪ್ರಕರಣಗಳಲ್ಲಿ ಅವರು ಪಂಚರಾಗಿದ್ದಾರೆ ಎಂದರೆ ಸರಿಯಲ್ಲ. ನೀವು ಸವಣೂರ ಬಿಟ್ಟಾಗ ಸಮಯ ಎಷ್ಟು ಆಗಿತ್ತು ಎಂದರೆ ನಿಖರವಾಗಿ ಗೊತ್ತಿಲ್ಲ. ನೀವು ಯಾವ ವಾಹನದಲ್ಲಿ ಹೋದಿರಿ ಎಂದರೆ ಸರ್ಕಾರಿ ವಾಹನ ಸಂಖ್ಯೆ ಕೆಎ- 27 ಜಿ 0432 ರಲ್ಲಿ ಹೋಗಿರುತ್ತೇವೆ. ಸವಣೂರ ಬಸ್ಸ ನಿಲ್ದಾಣದಿಂದ ಹೂವಿನಶಿಗ್ಲಿ ಗ್ರಾಮಕ್ಕೆ ಹೋಗಲು ಎಷ್ಟು ಸಮಯ ಬೇಕು ಎಂದರೆ ಸುಮಾರು 20 ನಿಮಿಷ ಬೇಕು. ಸವಣೂರಿನಿಂದ ಹೂವಿನಶಿಗ್ಲಿ ಗ್ರಾಮಕ್ಕೆ ಎಷ್ಟು ಕಿ ಮೀ ದೂರ ಇದೆ ಎಂದರೆ ಗೊತ್ತಿಲ್ಲ. ಅಂದಾಜು 30-35 ಕಿ ಮಿ ಆಗುತ್ತದೆ ಎಂದರೆ ಸರಿಯಲ್ಲ. ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ ಎಂದರೆ ನಾನು 20 ನಿಮಿಷದಲ್ಲಿ ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

ಹೂವಿನಶಿಗ್ಲಿ ಗ್ರಾಮದಲ್ಲಿ ಆರೋಪಿಯ ಮನೆ ಊರಿನ ಮದ್ಯಭಾಗದಲ್ಲಿ ಇದೆ ಎಂದರೆ ಸರಿ. ಮದ್ಯಭಾಗದಲ್ಲಿ ಇರುವುದರಿಂದ ಸಾಕಷ್ಟು ಜನಗಳು ಇರುತ್ತಾರೆ ಎಂದರೆ ಸಾಕಷ್ಟು ಜನ

ಇರಲಿಲ್ಲ ಎರಡು- ಮೂರು ಜನರು ಇದ್ದರು.  ಆರೋಪಿಯು ಯಾವುದೇ ಅಂಗಡಿಯನ್ನು ಹೊಂದಿರುವುದಿಲ್ಲ ಎಂದರೆ  ಕಿರಾಣಿ ಅಂಗಡಿ ಮತ್ತು ಮನೆ ಇದೆ.  ಅಂಕಿ ಅಂಶಗಳ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಮುದ್ದೆಮಾಲುಗಳಂತಹ  ಟೆಟ್ರಾ ಪ್ಯಾಕಗಳು ಸಾಮಾನ್ಯವಾಗಿ  ಮದ್ಯದ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಈ ಮುದ್ದೆಮಾಲುಗಳು ಆರೋಪಿಯಿಂದ ಸಿಕ್ಕಿರುತ್ತವೆ. ಸ್ಥಳದಲ್ಲಿ ಇದ್ದ ಸಾರ್ವಜನಿಕರ ಹೇಳಿಕೆಯನ್ನು ಏನಾದರೂ ಪಡೆದಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆರೋಪಿತನು ಯಾವುದೇ ಅಪರಾಧವನ್ನು ಮಾಡದೇ ಇದ್ದರು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಪಿರ್ಯಾಧಿಯಲ್ಲಿ ಮುಂಜಾನೆ 8.00 ಗಂಟೆ ಎಂದು ನಮೂದಿಸಿದ್ದು ಅದಕ್ಕಿಂತ ಪೂರ್ವದಲ್ಲಿ ಘಟನಾ ಜಾಗಕ್ಕೆ ಹೋಗಿ ಪಂಚನಾಮೆ ಮಾಡಿದ್ದೇವೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.